**E-ISSN:** 2583-9667
**Indexed Journal**
**Peer Reviewed Journal**
https://multiresearchjournal.theviews.in

**Received: 13-08-2024**
**Accepted: 22-09-2024**

**INTERNATIONAL JOURNAL OF ADVANCE RESEARCH IN MULTIDISCIPLINARY**

**Volume 2; Issue 4; 2024; Page No. 69-73**

# ಒಣಭೂಮಿ ಬೇಸಾಯದ ಬೆಳೆಗಳ ಉತ್ಪಾದನೆ

**ಡಾ. ಬಸವರಾಜ ಯು**

ಸಂಶೋಧಕರು, ತಾಯಕನಹಳ್ಳಿ ಕೂಡ್ಲಿಗಿ (ತಾ) ವಿಜಯನಗರ, ಕರ್ನಾಟಕ, ಭಾರತ

**DOI:** https://doi.org/10.5281/zenodo.14343589

**Corresponding Author:** ಡಾ. ಬಸವರಾಜ ಯು

**Abstract**

**ಕೃಷಿಬೆಳೆಗಳ ಉತ್ಪಾದನೆಯು ಬಿತ್ತನೆಯ ಪ್ರದೇಶ ಹಾಗೂ ಅದಕ್ಕೆ ಪೋಷಕಾಂಶಗಳನ್ನು ಹೊದಗಿಸುವುದರ ಮೇಲೆ ಬೆಳೆಯನ್ನು ಅಂದಾಜಿಸಬಹುದು. ಅಧಿಕ ಪ್ರಮಾಣದ ಇಳಿವರಿಯನ್ನು ಪಡೆಯಲು ಅವಧಿಗೆ ಸರಿಯಾಗಿ ನೀರನ್ನು ಹೊದಗಿಸಿ ಗೊಬ್ಬರ, ಕಳೆತೆಗೆಯುವುದು, ಹಾಗೂ ಸರಿಯಾದ ಸಮಯಕ್ಕೆ ಬೆಳೆಯನ್ನು ಕಟಾವು ಮಾಡಿದರೆ ಉತ್ತಮವಾದ ಫಲವನ್ನು ಪಡೆಯಬಹುದಾಗಿದೆ. ಅದರೆ ಒಣಭೂಮಿ ಬೇಸಾಯದಲ್ಲಿ ಅದಕ್ಕೆ ವಿಧಾನವನ್ನು ಬಳಸಬೇಕಾಗಿದೆ. ಕಾರಣ ಮಳೆಯನ್ನು ಅವಲಂಭಿಸಿ ಬೆಳೆಯನ್ನು ಬೆಳೆಯುವಂತಹ ಒಂದು ಕೃಷಿ ವಿಧಾನವಾಗಿದ್ದು ಮಳೆಯು ಈ ಕೃಷಿಯ ಮುಖ್ಯ ಭೂಮಿಕೆಯಾಗಿದೆ. ಮಳೆಯಯ ವರ್ಷದಲ್ಲಿ ಇಂತಿಷ್ಟೆ ದಿನ ಬರುತ್ತದೆ ಎಂದು ಹೇಳುವುದು ಸಾಧ್ಯವಿಲ್ಲ ಏಕೆಂದರೆ ಅನಿಶ್ಚಿತವಾದ ರೀತಿಯಲ್ಲಿ ಮಳೆ ಬರುತ್ತೆದೆ ಒಂದು ವರ್ಷ ಉತ್ತಮವಾದ ಮಳೆ ಬಂದರೆ ನಂತರ ವರ್ಷವು ಬರ ಅಥವಾ ಕ್ಷಾಮವು ಬರುವಂತಹ ಸಂದರ್ಭವನ್ನು ಕಾಣುತ್ತೇವೆ. ಅದೇ ರೀತಿಯಾಗಿ ಕಾಡು ದಟ್ಟವಾಗಿರುವ ಕಡೆ ಮಳೆಯು ಹೆಚ್ಚಾಗಿ ಬಂದು ಕಾಡು ಕಡಿಮೆ ಮಳೆಯು ಬರೆದೆ ಇರುವಂತಹ ಸಂದರ್ಭವು ಇರುವುದು ಕಾಣಲಾಗುತ್ತದೆ. ಕೃಷಿಯಲ್ಲಿ ಬೆಳೆಗಳನ್ನು ಅವುಗಳ ಬೆಳವಣಿಗೆ ಹಾಗೂ ಬಳಕೆಯ ಆಧಾರದ ಮೇಲೆ ವಿವಿಧ ಗುಂಪುಗಳಾಗಿ ವಿಂಗಡಿಸಲಾಗಿದೆ. ಏಕದಳ, ದ್ವಿದಳ, ಎಣ್ಣೆಕಾಳುಗಳು, ಸಿರಿಧ್ಯಾನಗಳು ಇನ್ನೂ ಮುಂತಾದವುಗಳಾಗಿ ವಿಂಗಡಿಸಲಾಗಿದೆ. ಅವುಗಳ ಇಳುವರಿ ಮತ್ತು ಉತ್ಪಾದನೆ ಮಾಹಿತಿಯು ಈ ಮುಂದಿನಂತಿದೆ.**

**Keywords:** ಕೃಷಿ, ಬೆಳೆಗಳು, ಉತ್ಪಾದನೆ, ಇಳುವರಿ, ಹೆಕ್ಟೇರ್‌ಗಳು

## Introduction

**ಏಕದಳ ಧಾನ್ಯಗಳ ಇಳುವರಿ:** ಈ ಧಾನ್ಯಗಳನ್ನು ಮುಖ್ಯವಾಗಿ ಆಹಾರ ಧಾನ್ಯಗಳಾಗಿದ್ದು ಒಣಭೂಮಿ ಮತ್ತು ನೀರಾವರಿ ಪ್ರದೇಶಗಳಲ್ಲಿ ಬಿತ್ತನೆ ಮಾಡಿ ಇಳುವರಿಯನ್ನು ಪಡೆಯುತ್ತಾರೆ. ನೀರಾವರಿ ಪ್ರದೇಶದಲ್ಲಿ ಉತ್ಪಾದನೆ ಪ್ರಮಾಣವು ಹೆಚ್ಚಾಗಿ ಬಂದರೆ ಒಣಭೂಮಿಯಲ್ಲಿ ಕಡಿಮೆ ಪ್ರಮಾಣದಲ್ಲಿ ಉತ್ಪಾದನೆಯಾಗುತ್ತದೆ. ಒಣಭೂಮಿಯಲ್ಲಿ ಜೋಳ, ರಾಗಿ ಸಜ್ಜೆ, ಮುಸಿಕಿನಜೋಳ ಇನ್ನೂ ಮುಂತಾದವುಗಳೂ ಆಧಿಕ ಪ್ರಮಾಣದಲ್ಲಿ ಬೆಳೆದರೆ ನೀರಾವರಿ ಪ್ರದೇಶದಲ್ಲಿ ವಾಣಿಜ್ಯ ಬೆಳೆಗಳನ್ನು ಹೆಚ್ಚಾಗಿ ಬೆಳೆಯುವುದು ಕಂಡುಬರುತ್ತದೆ. ಈ ಎಲ್ಲಾ ಬೆಳೆಗಳ ಉತ್ಪಾದನೆಯ ಪ್ರಮಾಣದ ಬಗ್ಗೆ ಈ ಕೆಳಗಿನ ಕೋಷ್ಟಕದಲ್ಲಿ ನೀಡಲಾಗಿದೆ.

**ಕೋಷ್ಟಕ 1:** ಕೃಷಿ ಸಾಗುವಳಿದಾರರು ಬೆಳೆಗಳ ಇಳುವರಿ ಏಕದಳ ಧಾನ್ಯಗಳ ಇಳುವರಿ (ಕೆ.ಜಿ/ ಹೆಕ್ಟೇರ್‌ಗಳಲ್ಲಿ)

| ಕ್ರಮ ಸಂಖ್ಯೆ | ತಾಲೂಕು | ಏಕದಳ ಧಾನ್ಯಗಳ ಇಳುವರಿ (ಕೆ.ಜಿ/ ಹೆಕ್ಟೇರ್‌ಗಳಲ್ಲಿ) | | | | | | | |
|---|---|---|---|---|---|---|---|---|---|
| | | ಭತ್ತ | ಜೋಳ | ಸಜ್ಜೆ | ಮೆಕ್ಕೆಜೋಳ | ರಾಗಿ | ಗೋಧಿ | ಒಟ್ಟು ಧಾನ್ಯ | ಒಟ್ಟು ಏಕದಳ ಮತ್ತು ಉಪತೃಣ ಧಾನ್ಯಗಳು |
| 1 | ಬಳ್ಳಾರಿ | 4380 | 2541 | 1416 | 5790 | 1334 | 1256 | 480 | 3890 |
| 2 | ಹಡಗಲಿ | 3150 | 1955 | 1582 | 3395 | 1199 | 1256 | 376 | 3110 |
| 3 | ಹಗರಿಬೊಮ್ಮನಹಳ್ಳಿ | 3776 | 3319 | 1904 | 3519 | 1375 | 1258 | 570 | 2899 |
| 4 | ಹರಪನಹಳ್ಳಿ | 3869 | 162 | 1684 | 3791 | 1429 | 1298 | 426 | 3445 |
| 5 | ಹೊಸಪೇಟೆ | 4714 | 3199 | 1471 | 4081 | 1700 | 1256 | 538 | 3027 |
| 6 | ಕಂಪ್ಲಿ | 3978 | 2436 | 1329 | 4017 | 1272 | 1256 | 487 | 4241 |
| 7 | ಕೊಟ್ಟೂರು | 3749 | 2696 | 1577 | 3728 | 1340 | 1153 | 485 | 3112 |
| 8 | ಕೂಡ್ಲಿಗಿ | 1904 | 3166 | 1588 | 3733 | 1125 | 1256 | 423 | 2657 |
| 9 | ಕುರುಗೋಡು | 4423 | 2958 | 1325 | 3580 | 942 | 1256 | 597 | 4929 |
| 10 | ಸಿರುಗುಪ್ಪ | 4897 | 2422 | 1298 | 4160 | 1994 | 1256 | 582 | 4376 |
| 11 | ಸಂಡೂರು | 4494 | 2916 | 1546 | 3572 | 1327 | 1256 | 369 | 2987 |
| | ಒಟ್ಟು | 4438 | 2507 | 1567 | 3735 | 1338 | 1256 | 486 | 3207 |

**ಮೂಲ:** ಆರ್ಥಿಕ ಮತ್ತು ಸಾಂಖಿಕ ನಿರ್ದೇಶನಾಲಯದ ಅಂತಿಮ ಅಂದಾಜು ವರದಿ ಪ್ರಕಾರ 2019–20

ಇಳುವರಿ ಎಂದ ತಕ್ಷಣ ರೈತರು ಕೃಷಿ ಭೂಮಿಯಲ್ಲಿನ ಉತ್ಪಾದನೆಯ ಪ್ರಮಾಣವು ಜ್ಞಾಪಕ ಬರುತ್ತದೆ. ಬೆಳೆಯ ಅವಧಿಯು ಸಂಪೂರ್ಣವಾಗಿ ರೈತರು ಬಿಡುವಿಲ್ಲದ ಕೆಲಸ ಮಾಡಿ ಉತ್ತಮವಾದ ಇಳುವರಿ ಬಂದರೆ ಶ್ರಮಕ್ಕೆ ತಕ್ಕ ಪ್ರತಿಫಲ ದೊರತಿದೆ ಎಂಬ ಭಾವನೆಯು ರೈತರಲ್ಲಿ ಮೂಡುತ್ತದೆ. ಉತ್ತಮ ಇಳುವರಿಯನ್ನು ಪಡೆಯಲು ರೈತರು ಉತ್ತಮವಾದ ಬೀಜ, ಗೊಬ್ಬರ, ಸರಿಯಾದ ಸಮಯಕ್ಕೆ ಮಳೆ ಬಂದರೆ ಉತ್ತಮವಾದ ಇಳುವರಿ ಪಡೆಯಲು ಸಾಧ್ಯವಾಗುತ್ತದೆ. ಕೃಷಿಯಲ್ಲಿ ಇಳುವರಿಯನ್ನು ಉತ್ತಮ ಪಡೆಸುವ ಸಲುವಾಗಿ ಕೆಲವು ಕೆಲಸವನ್ನು ಮಾಡುವುದು ಬಹಳ ಅವಶ್ಯಕವಾಗಿದೆ. ಅವುಗಳೆಂದರೆ ಭೂಮಿಯನ್ನು ಉತ್ತಮವಾಗಿ ಉಳುಮೆ ಮಾಡಬೇಕು ಭೂಮಿಯ ಮೇಲಿನ ಮಣ್ಣನ್ನು ತಿರುವಿ ಹಾಕಬೇಕಾಗುತ್ತದೆ. ಇದು ಆಳವಾದ ಉಳುಮೆಗೆ ಸಹಾಯಕ. ಆಗ ಭೂಮಿ ಮೇಲಿನ ಮಣ್ಣು ಹೊಸ ಮಣ್ಣು ಅಥವಾ ಹೊಸ ಪೋಷಕಾಂಶ ಹೊಂದಿರುವಂತ ಮಣ್ಣಿನಲ್ಲಿ ವ್ಯವಸಾಯವನ್ನು ಮಾಡಬೇಕು ಹಾಗೆಯೇ ಸರಿಯಾದ ಸಮಯಕ್ಕೆ ಗೊಬ್ಬರಗಳನ್ನ ನೀಡಬೇಕು. ನಂತರ ಕಳೆ ಕಾಸಿಗೆಯನ್ನು ತೆಗಸಬೇಕು, ಭೂಮಿಯು ಬೆಳೆಯ ಇಳುವರಿಗೆ ಯಾವುದೇ ಅಡ್ಡಿಯಿಲ್ಲದ ರೀತಿಯಲ್ಲಿ ಕಾರ್ಯವನ್ನು ನಿರ್ವಹಿಸಿದರೆ ಉತ್ತಮವಾದ ಇಳುವರಿ ಪಡೆಯುವಲ್ಲಿ ಸಫಲವಾಗುತ್ತದೆ.

ರಾಜ್ಯದಲ್ಲಿ ಭತ್ತದ ಇಳುವರಿಯು ಒಂದು ಹೆಕ್ಟೇರ್ ಪ್ರದೇಶದಲ್ಲಿ ಒಟ್ಟು 3330 ಕೆ.ಜಿ. (ಕರ್ನಾಟಕ ಅಂಕಿ ಅಂಶಗಳ ನೋಟ, 2019-20ರ ವರದಿ) ಗಳು ಎಂದು ಅಂದಾಜು ಮಾಡಲಾಗಿದೆ. ಅದು ಬಳ್ಳಾರಿ ಜಿಲ್ಲೆಯಲ್ಲಿ ಇಳುವರಿ 4438 ರಾಜ್ಯದ ಇಳಿವರಿಗೆ ಹೊಲಿಸಿದರೆ ಬಳ್ಳಾರಿ ಜಿಲ್ಲೆಯಲ್ಲಿನ ಇಳುವರಿಯು ಉತ್ತಮವಾಗಿದೆ. ನೀರಾವರಿ ಪ್ರದೇಶದಲ್ಲಿ ಈ ಭತ್ತದ ಬೆಳೆಯನ್ನು ಹೆಚ್ಚಿನ ಪ್ರಮಾಣದಲ್ಲಿ ಬೆಳೆಯನ್ನು ಬೆಳೆಯುತ್ತಾರೆ. ಜೋಳದ ಇಳುವರಿಯು ರಾಜ್ಯದಲ್ಲಿ ಒಂದು ಹೆಕ್ಟೇರ್‌ಗೆ 1204 ಕೆ.ಜಿ. ಎಂದು ಅಂದಾಜಿಸಲಾಗಿದೆ. ಜೋಳವನ್ನು ಮಳೆಯಾಶ್ರಿತ ಪ್ರದೇಶದಲ್ಲಿ ಬೆಳೆಯುವುದು ಹೆಚ್ಚಾಗಿದ್ದು ಇದು ಇಳುವರಿಯನ್ನು ಉತ್ತಮವಾಗಿ ಪಡೆಯಲು ಸರಿಯಾದ ಗೊಬ್ಬರ, ನೀರು ಬಹಳ ಮುಖ್ಯವಾಗುತ್ತದೆ. ಬಳ್ಳಾರಿ ಜಿಲ್ಲೆಯಲ್ಲಿ ಜೋಳದ ಇಳುವರಿಯು 2507 ಕೆ.ಜಿ.ಗಳು ಅಗಿರುತ್ತದೆ. ರಾಜ್ಯದ ಇಳುವರಿಗೆ ಹೊಲಿಸಿದರೆ ಬಳ್ಳಾರಿ ಜಿಲ್ಲೆ ಜೋಳದ ಇಳುವರಿ ಅಧಿಕವಾಗಿದೆ ಮಕ್ಕೆಜೋಳ ಇಳುವರಿಯನ್ನು ಗಮನಿಸಿದರೆ ರಾಜ್ಯದಲ್ಲಿ 3329 ಕೆ.ಜಿ. ಇಳುವರಿ ಎಂದು ಅಂದಾಜಿಸಲಾಗಿದ್ದು ಅದು ಬಳ್ಳಾರಿ ಜಿಲ್ಲೆಯಲ್ಲಿ 3735 ಕೆ.ಜಿ. ಅಗಿದೆ. ರಾಜ್ಯದ ಇಳುವರಿಗಿಂತಲೂ ಜಿಲ್ಲಾ ಇಳುವರಿಯು ಉತ್ತಮವಾಗಿರುವುದು ಕಾಣಬಹುದಾಗಿದೆ. ಒಟ್ಟಾರೆಯಾಗಿ ರಾಜ್ಯದ ಇಳುವರಿಗಳನ್ನು ಗಮನಿಸಿದರೆ ಜಿಲ್ಲಾ ಇಳುವರಿಗಳು ಉತ್ತಮವಾಗಿರುವುದು ಕಂಡುಬರುತ್ತದೆ.

**ಕೋಷ್ಟಕ 2:** ದ್ವಿದಳ ಧಾನ್ಯಗಳ ಇಳುವರಿ (ಕೆ.ಜಿ/ ಹೆಕ್ಟೇರ್‌ಗಳಲ್ಲಿ) 2019-20

| ಕ್ರಮ ಸಂಖ್ಯೆ | ತಾಲೂಕುಗಳು | ತೊಗರಿ | ಹುರಳಿ | ಉದ್ದು | ಹೆಸರು | ಅವರೆ | ಅಲಸಂದೆ | ಕಡಲೆ | ಇತರೆ ದ್ವಿದಳ ಧಾನ್ಯಗಳು | ಒಟ್ಟು ಧಾನ್ಯಗಳು | ಒಟ್ಟು ಆಹಾರ ಧಾನ್ಯಗಳು |
|---|---|---|---|---|---|---|---|---|---|---|---|
| 1 | ಬಳ್ಳಾರಿ | 1072 | 483 | 493 | 322 | 1027 | 466 | 791 | 773 | 814 | 3237 |
| 2 | ಹಡಗಲಿ | 494 | 770 | 503 | 307 | 893 | 501 | 647 | 521 | 572 | 2768 |
| 3 | ಹಗರಿಬೊಮ್ಮನಹಳ್ಳಿ | 862 | 673 | 464 | 482 | 917 | 490 | 687 | 712 | 613 | 2755 |
| 4 | ಹರಪನಹಳ್ಳಿ | 1245 | 790 | 320 | 275 | 940 | 497 | 506 | 542 | 962 | 3353 |
| 5 | ಹೊಸಪೇಟೆ | 645 | 1092 | 494 | 325 | 964 | 508 | 508 | 547 | 706 | 2836 |
| 6 | ಕಂಪ್ಲಿ | 874 | 686 | 0 | 259 | 0 | 426 | 754 | 540 | 651 | 4212 |
| 7 | ಕೊಟ್ಟೂರು | 874 | 1438 | 492 | 319 | 861 | 510 | 754 | 773 | 826 | 2965 |
| 8 | ಕೂಡ್ಲಿಗಿ | 811 | 2466 | 495 | 338 | 872 | 424 | 552 | 773 | 990 | 2557 |
| 9 | ಕುರುಗೋಡು | 1477 | 1101 | 495 | 259 | 942 | 501 | 1200 | 773 | 1330 | 4794 |
| 10 | ಸಿರುಗುಪ್ಪ | 632 | 1067 | 506 | 259 | 0 | 397 | 900 | 702 | 809 | 4268 |
| 11 | ಸಂಡೂರು | 810 | 1337 | 0 | 329 | 942 | 482 | 809 | 773 | 906 | 2945 |
| | ಒಟ್ಟು | 874 | 1279 | 483 | 332 | 917 | 792 | 754 | 602 | 784 | 3309 |

**ಮೂಲ:** ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದ ಅಂತಿಮ ಅಂದಾಜು ವರದಿ ಪ್ರಕಾರ 2020-21

ಧಾನ್ಯಗಳಲ್ಲಿ ಎರಡು ರೀತಿಯ ಧಾನ್ಯಗಳನ್ನು ನೋಡಬಹುದು. ಅವುಗಳು ಏಕದಳ ಧಾನ್ಯ ಮತ್ತು ದ್ವಿದಳ ಧಾನ್ಯಗಳು. ಇಲ್ಲಿ ದ್ವಿದಳ ಧಾನ್ಯಗಳ ಬಗ್ಗೆ ವಿಶ್ಲೇಷಣೆಯನ್ನು ಮಾಡಲಾಗುತ್ತದೆ. ಕೃಷಿ ಉತ್ಪಾದನೆಯ ಇಳುವರಿಯು ಬಹಳ ಮುಖ್ಯವಾಗುತ್ತದೆ. ಅದ್ದರಿಂದ ಬೆಳೆಯ ಪ್ರಮಾಣವನ್ನು ಅಂದಾಜು ಮಾಡಲು ಸಾಧ್ಯ. ಇಳುವರಿ ಆ ಭೂಮಿಯ ಫಲವತ್ತತೆ ಮತ್ತು ಬೀಜ, ಗೊಬ್ಬರ, ಪೋಷಣೆಯ ಮೇಲೆ ಇಳುವರಿಯು ನಿರ್ಧಾರವಾಗುತ್ತದೆ. ದ್ವಿದಳ ಧಾನ್ಯವಾದ ತೊಗರಿ ರಾಜ್ಯದಲ್ಲಿ 789 ಕೆ.ಜಿ (ಕರ್ನಾಟಕ ಅಂಕಿ ಅಂಶಗಳ ನೋಟ2020-21) ಇಳುವರಿ ಪಡೆಯುತಲಿದ್ದು. ಅದು ಬಳ್ಳಾರಿ ಜಿಲ್ಲೆಯಲ್ಲಿ 874ಕೆ.ಜಿ. ಇಳುವರಿ ಅಗಿರುತ್ತದೆ. ಕುರುಗೋಡು ತಾಲೂಕಿನಲ್ಲಿ 1477 ಕೆ.ಜಿ. ಇಳುವರಿಯನ್ನು ಪಡೆಯಲಾಗುತ್ತದೆ. ಅದ್ದರಿಂದ ಅಧಿಕ ಇಳುವರಿ ಪಡೆಯುವ ತಾಲೂಕು ಕುರುಗೊಡು ಅಗಿದೆ. ಹುರಳಿ ದ್ವಿದಳ ಧಾನ್ಯವಾಗಿದ್ದು, ಇದು ರಾಜ್ಯದಲ್ಲಿ 755 ಕೆ.ಜಿ. ಇಳುವರಿ ಹೊಂದಿದೆ ಬಳ್ಳಾರಿ ಜಿಲ್ಲೆಯಲ್ಲಿ 1337 ಕೆ.ಜಿ. ಇಳುವರಿಯನ್ನು ಪಡೆಯಲಾಗುತ್ತದೆ. ಕೂಡ್ಲಿಗಿ ತಾಲೂಕಿನಲ್ಲಿ 2466 ಕೆ.ಜಿ. ಇಳುವರಿಯನ್ನು ಪಡೆಯಲಾಗುತ್ತದೆ. ಕೂಡ್ಲಿಗಿ ತಾಲೂಕಿನಲ್ಲಿ ಹುರಳಿಯನ್ನು ಮಿಶ್ರ ಬೆಳೆ, ಇಲ್ಲ ಅಕ್ಕಡಿ ಸಾಲುಗಳಲ್ಲಿ ಈ ಹುರಳಿಯನ್ನು ಬೆಳೆಯಲಾಗುತ್ತದೆ. ಉದ್ದು ಬೆಳೆಯ ಇಳುವರಿಯನ್ನು ಗಮನಿಸಿದರೆ ರಾಜ್ಯದಲ್ಲಿ 495 ಕೆ.ಜಿ. ಇಳುವರಿಯನ್ನು ಹೊಂದಿದ್ದು ಜಿಲ್ಲೆಯಲ್ಲಿ 483 ಕೆ.ಜಿ. ಇಳುವರಿಯನ್ನು ಪಡೆಯಲಾಗುತ್ತದೆ ರಾಜ್ಯದ ಇಳುವರಿಗೆ ಹೊಲಿಸಿದರೆ ಜಿಲ್ಲಾ ಇಳಿವರಿ ಕಡಿಮೆ ಇಳುವರಿ ಹೊಂದಿರುವಂತಹದು ಕಂಡುಬರುತ್ತದೆ.

ಹೆಸರುಕಾಳು ದ್ವಿದಳಧಾನ್ಯವಾಗಿದ್ದು, ಇದರ ಇಳುವರಿಯನ್ನು ನೋಡಿದರೆ ರಾಜ್ಯದಲ್ಲಿ ಹೆಕ್ಟೇರ್‌ಗೆ 368 ಕೆ.ಜಿ. ಇಳುವರಿಯನ್ನು ಪಡೆಯಲಾಗುತ್ತದೆ. ಬಳ್ಳಾರಿ ಜಿಲ್ಲೆಯಲ್ಲಿ 332 ಕೆ.ಜಿ. ಇಳುವರಿಯನ್ನು ಪಡೆಯಲಾಗುತ್ತದೆ. ಜಿಲ್ಲೆಯಲ್ಲಿ ಹಗರಿಬೊಮ್ಮನಹಳ್ಳಿ ತಾಲೂಕು ಹೆಸರು ಇಳುವರಿಯಲ್ಲಿ ಮೊದಲ ಸ್ಥಾನವನ್ನು ಪಡೆದಿದೆ. ಅವರೆಕಾಳು ಜಿಲ್ಲೆಯಲ್ಲಿ 917 ಕೆ.ಜಿ. ಇಳುವರಿಯನ್ನು ಪಡೆಯಲಾಗುತ್ತದೆ. ಅವರೆ ಅಕ್ಕಡಿ ಮತ್ತು ಮಿಶ್ರ ಬೆಳೆಯಾಗಿ ಬೆಳೆಯಲಾಗುತ್ತದೆ. ಅಲಸಂದೆ ಬೆಳೆಯನ್ನು ಶೇಂಗಾ ಬೆಳೆಯ ಜೊತೆಯಲ್ಲಿ ಅಕ್ಕಡಿ ಸಾಲುಗಳಲ್ಲಿ ಹೆಚ್ಚಾಗಿ ಕೂಡ್ಲಿಗಿ ತಾಲೂಕಿನಲ್ಲಿ ಬೆಳೆಯಲಾಗುತ್ತದೆ. ಇದರ ಇಳುವರಿಯು 492 ಕೆ.ಜಿ ಇಳುವರಯನ್ನು ಪಡೆಯಲಾಗುತ್ತದೆ ಜಿಲ್ಲೆಯಲ್ಲಿ ಕಡಲೆ ಬೆಳೆಯನ್ನು ಹಿಂಗಾರು ಬೆಳೆಯಾಗಿ ಹೆಚ್ಚಾಗಿ ಬೆಳೆಯುತಲಿದ್ದು, ಇದರ ಇಳುವರಿಯು 755 ಕೆ.ಜಿ. ಯಾಗಿದೆ. ಕಡಲೆಯನ್ನು ಹಡಗಲಿ ತಾಲೂಕಿನಲ್ಲಿ ಹಿಂಗಾರಿಗೆ ಹೆಚ್ಚಿನ ಪ್ರಮಾಣದಲ್ಲಿ ಬೆಳೆಯಲಾಗುತ್ತದೆ. ಒಟ್ಟಾರೆಯಾಗಿ ಇಳುವರಿಯಲ್ಲಿ ಕೆಲವು ಬೆಳೆಗಳು ಉತ್ತಮವಾದ ಇಳುವರಿ ಬಂದರೆ ಕೆಲವು ಬೆಳೆಗಳು ಇಳುವರಿ ಕಡಿಮೆಯಾಗುತ್ತದೆ. ಇದಕ್ಕೆ ಕಾರಣ ಅಲ್ಲಿನ ಭೂ ಪ್ರದೇಶ ಮತ್ತು ಅಲ್ಲಿ ಹವಾಮಾನ ಬಹಳ ಮುಖ್ಯವಾದ ಪಾತ್ರವಹಿಸುತ್ತದೆ.

**ಕೋಷ್ಟಕ 3:** ಪ್ರಮುಖ ಎಣ್ಣೆ ಬೀಜಗಳು ಇಳುವರಿ ಕೆ.ಜಿ/ (ಹೆಕ್ಟೇರ್‌ಗಳಲ್ಲಿ) 2019–20

| ಕ್ರಮ ಸಂಖ್ಯೆ | ತಾಲೂಕುಗಳು | ಶೇಂಗಾ | ಸೂರ್ಯಕಾಂತಿ | ಕುಸುಮೆ | ಹರಳು | ಅಗಸೆ | ಸೋಯ ಬೀನ್ | ಎಳ್ಳು | ಹುಚ್ಚೆಳ್ಳು ಮತ್ತು ಸಾಸಿವೆ | ಒಟ್ಟು ಎಣ್ಣೆ ಕಾಳುಗಳು |
|---|---|---|---|---|---|---|---|---|---|---|
| 1 | ಬಳ್ಳಾರಿ | 1061 | 1030 | 619 | 970 | 00 | 00 | 940 | 0 | 901 |
| 2 | ಹಡಗಲಿ | 1272 | 744 | 583 | 970 | 513 | 1186 | 940 | 248 | 1137 |
| 3 | ಹಗರಿಬೊಮ್ಮನಹಳ್ಳಿ | 1628 | 884 | 583 | 970 | 00 | 1183 | 940 | 248 | 1449 |
| 4 | ಹರಪನಹಳ್ಳಿ | 1540 | 139 | 583 | 970 | 00 | 1183 | 940 | 248 | 1369 |
| 5 | ಹೊಸಪೇಟೆ | 1214 | 881 | 00 | 970 | 00 | 1183 | 1879 | 248 | 1199 |
| 6 | ಕಂಪ್ಲಿ | 1460 | 1089 | 583 | 970 | 00 | 00 | 940 | 00 | 1228 |
| 7 | ಕೊಟ್ಟೂರು | 1419 | 1087 | 583 | 970 | 00 | 00 | 940 | 248 | 1277 |
| 8 | ಕೂಡ್ಲಿಗಿ | 1264 | 789 | 00 | 970 | 00 | 00 | 905 | 248 | 1252 |
| 9 | ಕುರುಗೋಡು | 1465 | 1134 | 583 | 970 | 00 | 00 | 00 | 00 | 1122 |
| 10 | ಸಿರುಗುಪ್ಪ | 2014 | 1147 | 404 | 970 | 00 | 00 | 940 | 248 | 1163 |
| 11 | ಸಂಡೂರು | 1581 | 1057 | 583 | 970 | 00 | 1183 | 759 | 248 | 1553 |
| | ಒಟ್ಟು | 1423 | 1059 | 583 | 970 | 00 | 1183 | 940 | 248 | 1357 |

**ಮೂಲ:** ಅರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದ ಅಂತಿಮ ಅಂದಾಜು ವರದಿ, 2019–20

ಕೃಷಿಯಲ್ಲಿ ಎಣ್ಣೆ ಬೀಜಗಳಿಗೆ ಬಹಳ ಪ್ರಮುಖವಾದ ಸ್ಥಾನಮಾನವನ್ನು ಪಡೆದಿವೆ. ಏಕೆ ಎಂದರೆ ನಾವು ಪ್ರತಿ ನಿತ್ಯ ಆಡುಗೆಯಲ್ಲಿ ಎಣ್ಣೆಯನ್ನು ಬಳಸದೆ ಅಡುಗೆಯನ್ನು ತಯಾರಿಸುವುದು ಕಷ್ಟ ಸಾಧ್ಯವಾಗುತ್ತದೆ. ಅದ್ದರಿಂದ ಎಣ್ಣೆ ಮತ್ತು ಎಣ್ಣೆ ಬೀಜಗಳಿಗೆ ಬಹಳ ಬೇಡಿಕೆಯಿದೆ. ಎಣ್ಣೆ ಬೀಜಗಳ ಬಳಕೆಯಲ್ಲಿ ಹೆಚ್ಚಿನ ಬೀಜಗಳನ್ನು ಬಳಸುವುದೆಂದರೆ, ಶೇಂಗಾ ಮತ್ತು ಸೂರ್ಯಕಾಂತಿಯನ್ನು ಹೆಚ್ಚಿನ ಪ್ರಮಾಣದಲ್ಲಿ ಬಳಸಲಾಗಿದೆ. ಶೇಂಗಾದ ಇಳುವರಿಯು ರಾಜ್ಯದಲ್ಲಿ 1000 ಕೆ.ಜಿ. ಇಳುವರಿಯನ್ನು ಪಡೆಯಲಾಗುತ್ತದೆ. ಇದು ಬಳ್ಳಾರಿ ಜಿಲ್ಲೆಯಲ್ಲಿ 1423 ಕೆ.ಜಿ ಗಳಾಗಿದೆ. ರಾಜ್ಯದ ಇಳುವರಿಗೆ ಹೊಲಿಸಿದರೆ, ಬಳ್ಳಾರಿ ಜಿಲ್ಲೆಯ ಶೇಂಗಾ ಇಳುವರಿಯು ಆಧಿಕವಾಗಿರುವುದು ಕಾಣುತ್ತೇವೆ ಕೂಡ್ಲಿಗಿ ತಾಲೂಕಿನಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಒಣಭೂಮಿ ಬೇಸಾಯವನ್ನು ಮಾಡುತ್ತಿದ್ದು ಈ ತಾಲೂಕಿನಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಶೇಂಗಾವನ್ನು ಬೆಳೆಯುತ್ತಾರೆ ಹಾಗೂ ಕೂಡ್ಲಿಗಿಯಲ್ಲಿ 1264 ರಷ್ಟು ಇಳುವರಿಯನ್ನು ಪಡೆಯಲಾಗುತ್ತದೆ.

ಸೂರ್ಯಕಾಂತಿಯ ಇಳುವರಿಯನ್ನು ಗಮನಿಸಿದರೆ, ರಾಜ್ಯದಲ್ಲಿ 802 ಕೆ.ಜಿ. ಇಳುವರಿಯನ್ನು ಪಡೆಯಲಾಗುತ್ತದೆ. ಅದು ಬಳ್ಳಾರಿ ಜಿಲ್ಲೆಯಲ್ಲಿ 1059 ಕೆ.ಜಿ. ಯಾಗಿದೆ. ಎಣ್ಣೆ ಬೀಜಗಳಲ್ಲಿ ಮುಖ್ಯವಾದದು ಈ ಸೂರ್ಯಕಾಂತಿ. ಈ ಬೀಜದಿಂದ ಅಧಿಕ ಪ್ರಮಾಣದ ಎಣ್ಣೆಯನ್ನು ಉತ್ಪಾದನೆ ಮಾಡಲಾಗುತ್ತದೆ. ಸೂರ್ಯಕಾಂತಿಯನ್ನು ಕೂಡ್ಲಿಗಿ, ಹಡಗಲಿ, ಮತ್ತು ಹಗರಿಬೊಮ್ಮನಹಳ್ಳಿ ತಾಲೂಕುಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಬೆಳೆಯಲಾಗುತ್ತದೆ. ಕುಸುಮೆ ಇಳುವರಿಯು ಬಳ್ಳಾರಿ ಜಿಲ್ಲೆಯಲ್ಲಿ 583 ಕೆ.ಜಿ ಇಳುವರಿಯನ್ನು ಹೊಂದಿದೆ. ಈ ಬೆಳೆಯು ಬಳ್ಳಾರಿ ತಾಲೂಕಿನಲ್ಲಿ ಹೆಚ್ಚಿನ ಇಳುವರಿಯನ್ನು ಪಡೆಯಲಾಗುತ್ತದೆ. ಹರಳು ಬೆಳೆಯು ಸಹ 970 ಕೆ.ಜಿ ಇಳುವರಿಯನ್ನು ಪಡೆಯಲಾಗುತ್ತದೆ. ಸೋಯಾ ಬೀನ್ ಬೆಳೆಯನ್ನು ಬಳ್ಳಾರಿ ಜಿಲ್ಲೆಯಲ್ಲಿ ಕಡಿಮೆ ಪ್ರಮಾಣದಲ್ಲಿ ಬೆಳೆಯುತ್ತಲಿದ್ದು, ಇದರ ಇಳುವರಿ 1183 ಕೆ.ಜಿ. ಅಗಿರುತ್ತದೆ. ಎಳ್ಳು ಜಿಲ್ಲೆಯಲ್ಲಿ 940 ಕೆ.ಜಿ. ಇಳುವರಿಯನ್ನು ಪಡೆಯಲಾಗುತ್ತದೆ. ಜಿಲ್ಲೆಯಲ್ಲಿ ಎಳ್ಳಿನ ಉತ್ಪಾದನೆಯು ಕಡಿಮೆ ಪ್ರಮಾಣದಲ್ಲಿದೆ. ಒಟ್ಟಾರೆಯಾಗಿ ಎಣ್ಣೆ ಕಾಳುಗಳಲ್ಲಿ ಶೇಂಗಾ ಮತ್ತು ಸೂರ್ಯ ಕಾಂತಿಯನ್ನು ಹೆಚ್ಚು ಬಳಕೆ ಮಾಡಲಾಗುತ್ತದೆ ಮತ್ತು ಅಧಿಕ ಇಳುವರಿಯನ್ನು ನೀಡುವಂತಹ ಬೆಳೆಗಳು ಸಹ ಆಗಿವೆ.

**ಕೋಷ್ಟಕ 4:** ವಾಣಿಜ್ಯ ಬೆಳೆಗಳ ಇಳುವರಿ 2019–20 (ಕೆ.ಜಿ/ ಹೆಕ್ಟೇರ್‌ಗಳು)

| ಕ್ರಮ ಸಂಖ್ಯೆ | ತಾಲೂಕುಗಳು | ಹತ್ತಿ (ಕೆ ಜಿ/ ಹೆಕ್ಟೇರ್‌ಗಳಲ್ಲಿ) | ಕಬ್ಬು ಟನ್ /ಹೆಕ್ಟೇರ್‌ಗಳಲ್ಲಿ | ತಂಬಾಕು |
|---|---|---|---|---|
| 1 | ಬಳ್ಳಾರಿ | 654 | 106 | 00 |
| 2 | ಹಡಗಲಿ | 296 | 106 | 915 |
| 3 | ಹಗರಿಬೊಮ್ಮನಹಳ್ಳಿ | 672 | 70 | 915 |
| 4 | ಹರಪನಹಳ್ಳಿ | 303 | 144 | 915 |
| 5 | ಹೊಸಪೇಟೆ | 524 | 105 | 00 |
| 6 | ಕಂಪ್ಲಿ | 524 | 106 | 00 |
| 7 | ಕೊಟ್ಟೂರು | 473 | 106 | 915 |
| 8 | ಕೂಡ್ಲಿಗಿ | 496 | 106 | 905 |
| 9 | ಕುರುಗೋಡು | 893 | 00 | 00 |
| 10 | ಸಿರುಗುಪ್ಪ | 651 | 106 | 00 |
| 11 | ಸಂಡೂರು | 389 | 106 | 915 |
| ಒಟ್ಟು | ಒಟ್ಟು | 543 | 106 | 915 |

**ಮೂಲ:** ಅರ್ಥಿಕ ಮತ್ತು ಸಾಂಖಿಕ ನಿರ್ದೇಶನಾಲಯದ ಅಂತಿಮ ಅಂದಾಜು ವರದಿ 2019–20

ಈ ಮೇಲಿನ ಕೋಷ್ಟಕದಲ್ಲಿ ವಾಣಿಜ್ಯ ಬೆಳೆಗಳ ಇಳುವರಿಯ ಬಗ್ಗೆ ಮಾಹಿತಿಯನ್ನು ನೀಡಲಾಗಿದೆ, ವಾಣಿಜ್ಯ ಬೆಳೆಗಳನ್ನು ವ್ಯಾಪಾರದ ಉದ್ದೇಶದಿಂದ ಬೆಳೆಯಲಾಗುತ್ತದೆ. ಬೆಳೆದ ಬೆಳೆಯನ್ನು ಉತ್ತಮವಾದ ಮಾರುಕಟ್ಟೆಗೆ ಸಾಗಿಸಿ ಉತ್ತಮವಾದ ಬೆಲೆಯನ್ನು ಪಡೆಯುವುದಾಗಿರುತ್ತದೆ. ವಾಣಿಜ್ಯ ಬೆಳೆಗಳಾದ ಹತ್ತಿ, ಕಬ್ಬು, ತಂಬಾಕನ್ನು ಇಲ್ಲಿ ವಿವರಿಸಲಾಗಿದೆ. ಹತ್ತಿಯನ್ನು ವಾಣಿಜ್ಯ ಉದ್ದೇಶದಿಂದ ಬೆಳೆಯಲಾಗುತ್ತದೆ ಈ ಹತ್ತಿಯಿಂದ ವಿವಿಧ ರೀತಿಯ ಬಟ್ಟೆಯ ಉತ್ಪಾದನೆ ಮತ್ತು ಇನ್ನೂ ಅನೇಕ ರೀತಿಯ ಉದ್ದೇಶಗಗಳಿಗೆ ಬಳಸಲಾಗುತ್ತದೆ. ಹತ್ತಿಯನ್ನು ಒಣಭೂಮಿ ಮತ್ತು ನೀರಾವರಿ ಎರಡು ಬೇಸಾಯ ಪದ್ಧತಿಗಳಲ್ಲಿ ಸಹ ಬೆಳೆಯಲಾಗುತ್ತದೆ. ಕಬ್ಬು ಬೆಳೆಯು ಮುಖ್ಯವಾಗಿ ವಾಣಿಜ್ಯ ಉದ್ದೇಶದಿಂದ ಬೆಳೆಯ ಲಾಗುತ್ತದೆ. ತಂಬಾಕು ಸಹ ವಾಣಿಜ್ಯ ಉದ್ದೇಶದಿಂದ ಬೆಳೆಯಲಾಗುವ ಬೆಳೆಯಾಗಿದ್ದು ಕೂಡ್ಲಗಿ ಹಗರಿಬೊಮ್ಮನಹಳ್ಳಿ ಮತ್ತು ಹಡಗಲಿ ತಾಲೂಕುಗಳಲ್ಲಿ ಬೆಳೆಯುವುದು ತುಂಬಾ ಕಡಿಮೆಯಾಗಿದೆ. ಹತ್ತಿಯ ಇಳುವರಿ ರಾಜ್ಯದಲ್ಲಿ 510 ಕೆ.ಜಿ (ಕರ್ನಾಟಕ ಅಂಕಿ ಅಂಶಗಳ ನೋಟ 2020–21) ಇಳುವರಿಯನ್ನು ಬೆಳೆಯಲಾಗುತ್ತದೆ. ಬಳ್ಳಾರಿ ಜಿಲ್ಲೆಯಲ್ಲಿ 543 ಅಗಿದ್ದು, ರಾಜ್ಯದ ಇಳುವರಿಗಿಂತಲೂ ಹೆಚ್ಚಿನ ಪ್ರಮಾಣದ ಇಳುವರಿಯನ್ನು ಜಿಲ್ಲೆಯಲ್ಲಿ ಪಡೆಯಲಾಗುತ್ತದೆ. ಕಬ್ಬು ಬೆಳೆಯ ಉತ್ಪಾದನೆಯೂ ರಾಜ್ಯದಲ್ಲಿ 89ಟನ್ ಕಬ್ಬಿನ ಇಳುವರಿಯನ್ನು ಬೆಳೆಯಲಾಗುತ್ತದೆ. ಹೊಸಪೇಟೆ ತಾಲೂಕಿನಲ್ಲಿ ಹೆಚ್ಚಿನ ಪ್ರಮಾಣದ ಕಬ್ಬನ್ನು ಬೆಳೆಯಲಾಗುತ್ತದೆ. ಜಿಲ್ಲೆಯಲ್ಲಿ 106 ಟನ್ ಇಳುವರಿಯನ್ನು ಪಡೆಯಲಾಗುತ್ತದೆ. ಕಬ್ಬು ವಾರ್ಷಿಕ ಬೆಳೆಯಾಗಿದ್ದು, ಚನ್ನಾಗಿ ಪೋಷಣೆ ಮಾಡಿದರೆ ಬೆಳೆಯನ್ನು ಉತ್ತಮವಾದ ರೀತಿಯಲ್ಲಿ ಪಡೆಯಬಹುದು ಹಾಗೂ ಈ ಬೆಳೆಯನ್ನು ವಿವಿಧ ಉದ್ದೇಶಗಳಿಗೆ ಬಳಸಲಾಗುತ್ತದೆ. ತಂಬಾಕು ಬೆಳೆಯನ್ನು ಎಲ್ಲಾ ಕಡೆಯು ಬೆಳೆಯಲು ಸಾಧ್ಯವಿಲ್ಲ. ಅದಕ್ಕೆ ಅನುಮತಿಯನ್ನು ಪಡೆದು ಬೆಳೆಯನ್ನು ಬೆಳೆಯಬೇಕು. ಇದು ರಾಜ್ಯದಲ್ಲಿ 915 ಕೆ.ಜಿ. ಇಳುವರಿಯನ್ನು

ಪಡೆಯಲಾಗುತ್ತದೆ. ಜಿಲ್ಲೆಯಲ್ಲಿ 915 ಕೆ.ಜಿ. ಇಳುವರಿಯನ್ನು ಬೆಳೆಯಲಾಗುತ್ತದೆ ಒಟ್ಟಾರೆಯಾಗಿ ಈ ವಾಣಿಜ್ಯ ಬೆಳೆಗಳ ಇಳುವರು ರಾಜ್ಯ ಮತ್ತು ಜಿಲ್ಲೆಗೆ ಹೊಲಿಸಿದರೆ ಜಿಲ್ಲೆಯಲ್ಲಿ ಇಳುವರಿ ಅಧಿಕ ಪ್ರಮಾಣದಲ್ಲಿರುವುದು ಗಮನಾರ್ಹವಾಗಿದೆ.

**ಕೋಷ್ಟಕ 5:** ಏಕದಳ ಧಾನ್ಯಗಳ ಉತ್ಪಾದನೆ (ಟನ್ ಗಳಲ್ಲಿ)2019–20

| ಕ್ರ. ಸಂಖ್ಯೆ | ತಾಲೂಕುಗಳು | ಅಕ್ಕಿ | ಜೋಳ | ಸಜ್ಜೆ | ಮುಸಿಕಿನ ಜೋಳ | ರಾಗಿ | ಗೋಧಿ | ಇತರೆ ಏಕದಳ ಮತ್ತು ತೃಣ ಧಾನ್ಯಗಳು | ಒಟ್ಟು ಏಕ ದಳ ಧಾನ್ಯಗಳು |
|---|---|---|---|---|---|---|---|---|---|
| 1 | ಬಳ್ಳಾರಿ | 102167 | 18592 | 849 | 7549 | 31 | 20 | 348 | 129556 |
| 2 | ಹಡಗಲಿ | 26356 | 9039 | 4518 | 139977 | 1173 | 07 | 70 | 181140 |
| 3 | ಹಗರಿಬೊಮ್ಮನಹಳ್ಳಿ | 10708 | 6587 | 23223 | 65752 | 1728 | 06 | 211 | 108215 |
| 4 | ಹರಪನಹಳ್ಳಿ | 18623 | 8448 | 443 | 276786 | 13490 | 32 | 80 | 317902 |
| 5 | ಹೊಸಪೇಟೆ | 7994 | 1906 | 3562 | 16406 | 206 | 34 | 697 | 30807 |
| 6 | ಕಂಪ್ಲಿ | 97144 | 3086 | 162 | 13181 | 06 | 18 | 43 | 113640 |
| 7 | ಕೊಟ್ಟೂರು | 05 | 2745 | 5392 | 67255 | 3575 | 06 | 129 | 79107 |
| 8 | ಕೂಡ್ಲಿಗಿ | 36 | 11975 | 7689 | 39455 | 3334 | 16 | 674 | 63179 |
| 9 | ಕುರುಗೋಡು | 80208 | 2062 | 263 | 13336 | 01 | 13 | 39 | 95922 |
| 10 | ಸಿರುಗುಪ್ಪ | 194043 | 13423 | 991 | 3923 | 50 | 06 | 1101 | 213537 |
| 11 | ಸಂಡೂರು | 6196 | 4272 | 4995 | 49692 | 1686 | 28 | 468 | 67337 |
| ಜಿಲ್ಲಾ ಮೊತ್ತ | | 553.85 | 82310 | 48423 | 683388 | 25088 | 184 | 3858 | 1396336 |

**ಮೂಲ:** ವಾರ್ಷಿಕ ಅಂಕಿ ಅಂಶಗಳ ವರದಿ. 2019–20

ಈ ಮೇಲಿನ ಕೋಷ್ಟಕದಲ್ಲಿ ಏಕದಳ ಧಾನ್ಯಗಳ ಉತ್ಪಾದನೆಯ ಬಗ್ಗೆ ಮಾಹಿತಿಯನ್ನು ನೀಡಲಾಗಿದೆ. ಆಹಾರ ಧಾನ್ಯಗಳಲ್ಲಿ ಏಕದಳ ಧಾನ್ಯವು ಒಂದು ಈ ಧಾನ್ಯಗಳಲ್ಲಿ ಅಕ್ಕಿ, ಜೋಳ ಮತ್ತು ರಾಗಿ ಆಹಾರ ಧಾನ್ಯಗಳನ್ನು ಹೆಚ್ಚಾಗಿ ಬಳುಸುತ್ತಾರೆ. ರಾಜ್ಯದಲ್ಲಿ ಅಕ್ಕಿ ಉತ್ಪಾದನೆಯು 39,47,973 ಟನ್‌ಗಳಷ್ಟು (ಕರ್ನಾಟಕ ಅಂಕಿ ಅಂಶಗಳ ನೋಟ 2020–21) ಆಹಾರ ಧಾನ್ಯಗಳನ್ನು ಉತ್ಪಾದನೆ ಮಾಡಲಾಗುತ್ತದೆ. ಅಕ್ಕಿ ಬಳಕೆಯು ದಿನ ಬಳಕೆಯ ವಸ್ತುಗಳಲ್ಲಿ ಒಂದಾಗಿದ್ದು, ಇದನ್ನು ರಾಜ್ಯ ಮತ್ತು ಜಿಲ್ಲೆಯಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಬಳಸಲಾಗುತ್ತದೆ. ರಾಜ್ಯದಲ್ಲಿ ಜೋಳ ಉತ್ಪಾದನೆಯು 10,45,642 ಟನ್‌ಗಳಷ್ಟು ಉತ್ಪಾದನೆಯನ್ನು ಮಾಡುತ್ತದೆ. ಜೋಳವನ್ನು ಸಹ ದಿನ ನಿತ್ಯ ಆಹಾರ ಧಾನ್ಯವಾಗಿ ಬಳಕೆ ಮಾಡುತ್ತಾರೆ. ಸಜ್ಜೆ ಪ್ರಮಾಣ ರಾಜ್ಯದಲ್ಲಿ 3,67056 ಟನ್‌ಗಳ ಉತ್ಪಾದನೆಯಾಗುತ್ತಿದೆ. ಅದೆ ರೀತಿಯಾಗಿ ಮುಸುಕಿನ ಜೋಳವು ರಾಜ್ಯದಲ್ಲಿ ಒಟ್ಟು ಉತ್ಪಾದನೆ 4745711ಟನ್ ಉತ್ಪಾದನೆಯಾಗುತ್ತದೆ. ರಾಗಿ ಉತ್ಪಾದನೆಯು 11,62,531 ಟನ್‌ಗಳ ಗೋಧಿ ಉತ್ಪಾದನೆಯು 1,80,114 ಟನ್‌ಗಳು ಉತ್ಪಾದನೆ ಮಾಡಲಾಗುತ್ತದೆ.

ಬಳ್ಳಾರಿ ಜಿಲ್ಲಾ ಏಕದಳ ಧಾನ್ಯಗಳ ಉತ್ಪಾದನೆಯನ್ನು ನೋಡಿದರೆ, ಅಕ್ಕಿ ಉತ್ಪಾದನೆ 5,53,085 ಟನ್ ಗಳನ್ನು ಉತ್ಪಾದನೆ ಮಾಡಲಾಗುತ್ತದೆ. ಬಳ್ಳಾರಿ ತಾಲೂಕು ಅತಿ ಹೆಚ್ಚಿನ ಅಕ್ಕಿಯನ್ನು ಉತ್ಪಾದನೆ ಮಾಡುವ ತಾಲೂಕು ಆಗಿದ್ದು ಕೊಟ್ಟೂರು ಅತಿ ಕಡಿಮೆ ಅಥವಾ ಕೊನಯ ಸ್ಥಾನ ಪಡೆದಿದೆ ಉತ್ಪಾದನೆಯಲ್ಲಿ ಎರಡನೇ ಸ್ಥಾನದಲ್ಲಿರುವ ತಾಲೂಕು ಎಂದರೆ ಸಿರುಗುಪ್ಪ ತಾಲೂಕು ಅಗಿದೆ. ಜಿಲ್ಲೆಯಲ್ಲಿ 82310 ಟನ್ ಜೋಳವನ್ನು ಉತ್ಪಾದನೆ ಮಾಡಲಾಗುತ್ತದೆ. ಬಳ್ಳಾರಿ ತಾಲೂಕು 18592ಟನ್ ಜೋಳದ ಉತ್ಪಾದನೆ ಮಾಡಿ ಪ್ರಥಮ ಸ್ಥಾನವನ್ನು ಪಡೆದಿದೆ. ಎರಡೆನೇಯ ಸ್ಥಾನದಲ್ಲಿ ಕೂಡ್ಲಿಗಿ ತಾಲೂಕು 11,975ಟನ್ ಉತ್ಪಾದನೆ ಮಾಡಿ ಎರಡನೆಯ ಸ್ಥಾನವನ್ನು ಪಡೆದುಕೊಂಡಿದೆ. ಮುಸುಕಿನ ಜೋಳವನ್ನು ಜಿಲ್ಲೆಯಲ್ಲಿ 6,83,388ಟನ್ ಉತ್ಪಾದನೆ ಬೆಳೆಯಲಾಗುತ್ತದೆ. ಮುಸುಕಿನ ಜೋಳದಲ್ಲಿ ಹಡಗಲಿ ತಾಲೂಕು 1,39,977ಟನ್ ಗಳು ಉತ್ಪಾದನೆಯನ್ನು ಮಾಡಿ ಪ್ರಥಮ ಸ್ಥಾನದಲ್ಲಿದ್ದರೆ. ಗೋಧಿ ಉತ್ಪಾದನೆ ಜಿಲ್ಲೆಯಲ್ಲಿ ಕೊನೆಯ ಸ್ಥಾನದಲ್ಲಿದೆ. ಬಳ್ಳಾರಿ ಜಿಲ್ಲೆಯಲ್ಲಿ 184 ಟನ್ ಮಾತ್ರವೇ ಉತ್ಪಾದನೆ ಮಾಡಲಾಗುತ್ತದೆ. ಹರಪನಹಳ್ಳಿ ಮತ್ತು ಹೊಸಪೇಟೆ ತಾಲೂಕುಗಳಲ್ಲಿ ಮಾತ್ರ ಈ ಗೋಧಿಯನ್ನು ಹೆಚ್ಚು ಬೆಳೆಯಲಾಗುತ್ತದೆ. ಇನ್ನುಳಿದ ತಾಲೂಕುಗಳಲ್ಲಿ ಉತ್ಪಾದನೆ ಕಡಿಮೆ ಪ್ರಮಾಣದಲ್ಲಿದೆ. ಒಟ್ಟಾರೆಯಾಗಿ ಬಳ್ಳಾರಿ ಜಿಲ್ಲೆಯಾ ಜೋಳ, ಮುಸುಕಿನ ಜೋಳ, ಮತ್ತು ರಾಗಿ ಉತ್ಪಾದನೆಯಲ್ಲಿ ಮುಂಚೋಣಿಯಲ್ಲಿದೆ ಎಂಬುವುದು ಈ ಕೋಷ್ಟಕದಿಂದ ತಿಳಿದುಬರುತ್ತದೆ.

**ಕೋಷ್ಟಕ 6:** ಬಳ್ಳಾರಿ ಜಿಲ್ಲೆಯ ದ್ವಿದಳ ಧಾನ್ಯಗಳು ಉತ್ಪಾದನೆ

| ದ್ವಿದಳ ಧಾನ್ಯಗಳ ಉತ್ಪಾದನೆ 2019–20 | | | | | | | | | | | |
|---|---|---|---|---|---|---|---|---|---|---|---|
| ಕ್ರ ಸಂ | ತಾಲೂಕುಗಳು | ತೊಗರಿ | ಹುರಳಿ | ಉದ್ದು | ಹೆಸರು | ಅವರೆ | ಅಲಸಂದೆ | ಕಡಲೆ | ಇತರೆ ದ್ವಿದಳ ದಾನ್ಯಗಳು | ಒಟ್ಟು ದ್ವಿದಳ ಧಾನ್ಯಗಳು | ಒಟ್ಟು ಆಹಾರ ಧಾನ್ಯಗಳು |
| 1 | ಬಳ್ಳಾರಿ | 883 | 22 | 06 | 03 | 10 | 14 | 6363 | 01 | 7302 | 136858 |
| 2 | ಹಡಗಲಿ | 1852 | 40 | 01 | 04 | 18 | 377 | 2884 | 07 | 5183 | 186323 |
| 3 | ಹಗರಿಬೊಮ್ಮನಹಳ್ಳಿ | 521 | 82 | 04 | 39 | 52 | 710 | 115 | 14 | 1537 | 109752 |
| 4 | ಹರಪನಹಳ್ಳಿ | 2633 | 110 | 01 | 10 | 32 | 39 | 544 | 26 | 3395 | 321297 |
| 5 | ಹೊಸಪೇಟೆ | 126 | 279 | 03 | 01 | 12 | 218 | 03 | 04 | 645 | 31453 |
| 6 | ಕಂಪ್ಲಿ | 46 | 05 | 00 | 00 | 00 | 34 | 54 | 03 | 142 | 113782 |
| 7 | ಕೊಟ್ಟೂರು | 841 | 40 | 00 | 03 | 35 | 20 | 494 | 11 | 1444 | 80551 |
| 8 | ಕೂಡ್ಲಿಗಿ | 968 | 473 | 01 | 14 | 03 | 30 | 03 | 04 | 1496 | 64675 |
| 9 | ಕುರುಗೊಡು | 865 | 10 | 09 | 00 | 01 | 23 | 96 | 01 | 1005 | 96927 |
| 10 | ಸಿರುಗುಪ್ಪ | 272 | 02 | 03 | 00 | 00 | 14 | 924 | 12 | 1227 | 214764 |
| 11 | ಸಂಡೂರು | 171 | 185 | 00 | 04 | 06 | 24 | 43 | 01 | 414 | 67751 |
| | ಒಟ್ಟು | 9547 | 1248 | 28 | 70 | 169 | 1501 | 11802 | 84 | 24449 | 1420785 |

**ಮೂಲ:** ವಾರ್ಷಿಕ ಅಂಕಿ ಅಂಶಗಳು 2019–20

ಈ ಮೇಲಿನ ಕೋಷ್ಟಕದಲ್ಲಿ ಬಳ್ಳಾರಿ ಜಿಲ್ಲೆಯ ದ್ವಿದಳ ಧಾನ್ಯಗಳ ಉತ್ಪಾದನೆ ಬಗ್ಗೆ ತಿಳಿಸುತ್ತದೆ. ಆಹಾರ ಧಾನ್ಯಗಳಲ್ಲಿ ದ್ವಿದಳ ಧಾನ್ಯಗಳು ಒಂದು ಅಗಿದ್ದು. ದ್ವಿದಳ ಧಾನ್ಯಗಳಲ್ಲಿ ತೊಗರಿಯನ್ನು ಅತಿ ಬಳಕೆ ಮಾಡುವ ಬೆಳೆಯಾಗಿದೆ ರಾಜ್ಯದಲ್ಲಿ 11,25,991 ಟನ್‌ಗಳ(ಕರ್ನಾಟಕ ಅಂಕಿ ಅಂಶಗಳ ನೋಟ.2020–21) ಉತ್ಪಾದನೆಯನ್ನು ಮಾಡಲಾಗುತ್ತದೆ ಬಳ್ಳಾರಿ ಜಿಲ್ಲೆಯಲ್ಲಿ 9547 ಟನ್ ತೊಗರಿಯು ಉತ್ಪಾದನೆ ಯಾಗುತ್ತದೆ. ಹಡಗಲಿ ಮತ್ತು ಹರಪನಹಳ್ಳಿ ತಾಲೂಕುಗಳು ಹೆಚ್ಚಿನ ತೊಗರಿಯನ್ನು ಉತ್ಪಾದನೆ ಮಾಡುವಂತ ತಾಲೂಕುಗಳಾಗಿದ್ದು, ಕಂಪ್ಲಿ 46 ಟನ್ ತೊಗರಿಯನ್ನು ಉತ್ಪಾದನೆ ಮಾಡುವ ಮೂಲಕ ಅತಿ ಕಡಿಮೆ ಉತ್ಪಾದನೆಯನ್ನು ಮಾಡುವ ತಾಲೂಕಾಗಿದೆ.

ಹುರಳಿಯ ಉತ್ಪಾದನೆ 1248 ಟನ್ ಉತ್ಪಾದನೆ ಮಾಡಲಾಗಿದ್ದು, ಜಿಲ್ಲೆಯಲ್ಲಿ

ಕಡಿಮೆ ಉತ್ಪಾದನೆಯನ್ನು ಮಾಡಲಾಗುತ್ತದೆ. ಜಿಲ್ಲೆಯಲ್ಲಿ ಹೆಸರು ಕಾಳು ಉತ್ಪಾದನೆಯಲ್ಲಿ 70 ಟನ್‌ಗಳಷ್ಟು ಉತ್ಪಾದನೆಯಿದೆ. ಅಲಸಂದೆಯು ಸಹ ಜಿಲ್ಲೆಯಲ್ಲಿ ಕಡಿಮೆ ಉತ್ಪಾದನೆ ಮಾಡಲಾಗುತ್ತದೆ. ಒಟ್ಟಾರೆಯಾಗಿ ದ್ವಿದಳ ಧಾನ್ಯಗಳ ಉತ್ಪಾದನೆಯು ಜಿಲ್ಲೆಯಲ್ಲಿ ಕಡಿಮೆಯಿದೆ ಎಂದು ಕಂಡುಬರುತ್ತದೆ.

**ಕೋಷ್ಟಕ 7:** ಪ್ರಮುಖ ಎಣ್ಣೆಕಾಳುಗಳು ಉತ್ಪಾದನೆ (ಟನ್‌ಗಳಲ್ಲಿ)

| ಕ್ರಮ ಸಂಖ್ಯೆ | ತಾಲೂಕುಗಳು | ಶೇಂಗಾ | ಸೂರ್ಯ ಕಾಂತಿ | ಕುಸುಮೆ | ಹರಳು | ಎಳ್ಳು | ಸೊಯಾಬೀನ್ | ಹುಚ್ಚುಳ್ಳು ಸಾಸಿವೆ | ಇತರೆ ಎಣ್ಣೆ ಕಾಳು |
|---|---|---|---|---|---|---|---|---|---|
| 1 | ಬಳ್ಳಾರಿ | 435 | 00 | 294 | 13 | 02 | 00 | 00 | 1149 |
| 2 | ಹಡಗಲಿ | 7942 | 1585 | 05 | 04 | 03 | 02 | 01 | 9542 |
| 3 | ಹಗರಿಬೊಮ್ಮನಹಳ್ಳಿ | 15700 | 2656 | 03 | 35 | 08 | 03 | 01 | 18405 |
| 4 | ಹರಪನಹಳ್ಳಿ | 3985 | 1097 | 06 | 01 | 01 | 29 | 02 | 5112 |
| 5 | ಹೊಸಪೇಟೆ | 988 | 81 | 00 | 01 | 51 | 02 | 00 | 1124 |
| 6 | ಕಂಪ್ಲಿ | 65 | 27 | 06 | 01 | 02 | 00 | 02 | 102 |
| 7 | ಕೊಟ್ಟೂರು | 6093 | 3480 | 01 | 01 | 01 | 00 | 00 | 9576 |
| 8 | ಕೂಡ್ಲಿಗಿ | 42845 | 635 | 00 | 10 | 36 | 00 | 01 | 43528 |
| 9 | ಕುರುಗೋಡು | 09 | 28 | 01 | 10 | 00 | 00 | 00 | 47 |
| 10 | ಸಿರುಗುಪ್ಪ | 217 | 1143 | 22 | 164 | 04 | 00 | 01 | 1551 |
| 11 | ಸಂಡೂರು | 6501 | 53 | 01 | 12 | 30 | 01 | 09 | 6606 |
| | ಒಟ್ಟು | 88486 | 12474 | 318 | 252 | 119 | 37 | 16 | 101702 |

**ಮೂಲ:** ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದ ಅಂತಿಮ ಅಂದಾಜು ವರದಿ ಪ್ರಕಾರ 2019–20

ಈ ಮೇಲಿನ ಕೋಷ್ಟಕದಲ್ಲಿ ಮುಖ್ಯವಾಗಿ ಎಣ್ಣೆಕಾಳುಗಳ ಉತ್ಪಾದನೆ ಬಗ್ಗೆ ವಿವರಿಸಿದ್ದು ಬೆಳೆಗಳನ್ನು ಎಷ್ಟು ಪ್ರಮಾಣದಲ್ಲಿ ಉತ್ಪಾದನೆ ಮಾಡಲಾಗುತ್ತದೆ ಎಂಬುವುದನ್ನು ಇಲ್ಲಿ ತಿಳಸಲಾಗಿದೆ. ಬಳ್ಳಾರಿ ಜಿಲ್ಲೆಯಲ್ಲಿ ಎಣ್ಣೆಕಾಳುಗಳ ಉತ್ಪಾದನೆಯನ್ನು ಇಲ್ಲಿ ವಿವರಿಸಲಾಗಿದೆ. ಹೆಚ್ಚಿನ ಪ್ರಮಾಣದ ಶೇಂಗಾವನ್ನು ಕೂಡ್ಲಿಗಿ ತಾಲೂಕಿನಲ್ಲಿ ಉತ್ಪಾದನೆಯನ್ನು ಮಾಡಲಾಗುತ್ತದೆ. ಈ ಉತ್ಪಾದನೆಯು ಒಣಭೂಮಿ ಬೇಸಾಯದಿಂದ ಹೆಚ್ಚಿನ ಪ್ರಮಾಣದಲ್ಲಿ ಉತ್ಪಾದನೆ ಮಾಡಲಾಗುತ್ತದೆ. ಅದೇ ರೀತಿಯಾಗಿ ಎಣ್ಣೆಕಾಳುಗಳು ಶೇಂಗಾವನ್ನು ಹಗರಿಬೊಮ್ಮನಹಳ್ಳಿ ತಾಲೂಕಿನಲ್ಲಿ ಹೆಚ್ಚಿನ ಉತ್ಪಾದನೆಯನ್ನು ಮಾಡುತ್ತಾರೆ. ಸೂರ್ಯಕಾಂತಿಯನ್ನು ಹಗರಿಬೊಮ್ಮನಹಳ್ಳಿ ಹಾಗೂ ಹಡಗಲಿಯಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಉತ್ಪಾದನೆ ಯಾಗುತ್ತದೆ ಎಣ್ಣೆಕಾಳುಗಳ ಉತ್ಪಾದನೆಯಿಂದ ಹೆಚ್ಚಿನ ಪ್ರಮಾಣದಲ್ಲಿ ಆದಾಯವನ್ನು ಗಳಿಸಬಹುದಾಗಿದ್ದು ಇದು ಒಂದು ವೃತ್ತಿಯಾಗಿಯೂ ಬದಲಾಗಿದೆ.

ಕುಸುಮೆಯನ್ನು ಬಳ್ಳಾರಿ ತಾಲೂಕಿನಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಉತ್ಪಾದನೆ ಮಾಡಲಾಗುತ್ತದೆ ಕೂಡ್ಲಿಗಿ ತಾಲೂಕಿನಲ್ಲಿ ಈ ಕುಸುಮೆಯನ್ನು ಉತ್ಪಾದನೆಯು ಕನಿಷ್ಟಮಟ್ಟದಲ್ಲಿದೆ ಕುಸುಮೆಯನ್ನು ಬಳ್ಳಾರಿ ತಾಲೂಕು ಹಾಗೂ ಸಿರುಗುಪ್ಪ ತಾಲೂಕಿನಲ್ಲಿ ಬೆಳೆಯುತ್ತಾರೆ. ಅವುಗಳನ್ನು ಹೊರತು ಪಡಿಸಿದರೆ ಬೇರೆ ತಾಲೂಕಿನಲ್ಲಿ ಕುಸುಮೆಯನ್ನು ಬೆಳೆಯುತ್ತಿರುವುದು ಕಂಡುಬಂದಿಲ್ಲ. ಅದೇ ರೀತಿಯಾಗಿ ಹರಳುನ್ನು ಹಗರಿಬೊಮ್ಮನಹಳ್ಳಿ ಹಾಗೂ ಸಿರುಗುಪ್ಪಗಳಲ್ಲಿ ಬೆಳೆಯುತ್ತಿರುವುದು ಕಂಡುಬರುತ್ತದೆ. ಇನ್ನೂ ಉಳಿದ ತಾಲೂಕಿನಲ್ಲಿ ಅತಿ ಕಡಿಮೆ ಪ್ರಮಾಣದಲ್ಲಿ ಉತ್ಪಾದನೆ ಮಾಡಿರುವುದು ತಿಳಿದುಬರುತ್ತದೆ. ಎಳ್ಳುನ್ನು ಹೊಸಪೇಟೆ ಹಾಗೂ ಕೂಡ್ಲಿಗಿ ತಾಲೂಕಿನಲ್ಲಿ ಉತ್ಪಾದನೆಯನ್ನು ಮಾಡಲಾಗುತ್ತದೆ ಉಳಿದ ತಾಲೂಕಿನಲ್ಲಿ ಉತ್ಪಾದನೆ ಕನಿಷ್ಟ ಮಟ್ಟದಲ್ಲಿರುವುದನ್ನು ಗಮನಿಸಲಾಗಿದೆ. ಅದೇ ರೀತಿಯಾಗಿ ಅಗಸೆ ಬೀಜವನ್ನು ಬಳ್ಳಾರಿ ಜಿಲ್ಲೆಯಲ್ಲಿ ಉತ್ಪಾದನೆ ಮಾಡುತ್ತಿಲ್ಲ ಸೋಯ ಬೀನ್ ಉತ್ಪಾದನೆಯು ಹರಪನಹಳ್ಳಿ ತಾಲೂಕಿನಲ್ಲಿ ಮಾತ್ರವೇ ಉತ್ಪಾದನೆ ಮಾಡುತ್ತಿದ್ದಾರೆ. ಅವುಗಳನ್ನು ಹೊರತುಪಡಿಸಿದರೆ ಉಳಿದ ತಾಲೂಕಿನಲ್ಲಿ ಉತ್ಪಾದನೆ ಮಾಡುತಿಲ್ಲ ಎಂಬುವುದು ಸ್ಪಷ್ಟವಾಗಿದೆ.

## ಉಪಸಂಹಾರ

ಕೃಷಿಬೆಳೆಗಳು ಅಧಿಕ ಪ್ರಮಾಣ ಆಹಾರ ಧಾನ್ಯಗಳ ಉತ್ಪಾದನೆಯಲ್ಲಿ ತೊಡಗಿದ್ದರು ಸಹ ಸಮಯಕ್ಕೆ ಸರಿಯಾಗಿ ಆಹಾರ ಧಾನ್ಯಗಳನ್ನು ಪೂರೈಸಲೂ ಸಾಧ್ಯವಾಗುತ್ತಿಲ್ಲ ಕಾರಣ ಈ ಅನಿಶ್ಚಿತವಾದ ಮಳೆಯಿಂದ ಇದು ಬರೆದೆ ಇದ್ದಾರೆ ಬೆಳೆಯ ಪೂರ್ಣಪ್ರಮಾಣದಲ್ಲಿ ಒಣಗುತ್ತದೆ ಅತಿ ಕಡಿಮೆ ಪ್ರಮಾಣದಲ್ಲಿ ಉತ್ಪಾದನೆಯಗುತ್ತದೆ ಇಲ್ಲ ಸಂಪೂರ್ಣವಾಗಿ ವಿಫಲವಾಗುತ್ತದೆ. ಅದ್ದರಿಂದ ಒಣಭೂಮಿಯಲ್ಲಿ ಬೆಳೆಗಳ ಉತ್ಪಾದನೆಯು ಬಹಳ ಮುಖ್ಯವಾಗುತ್ತದೆ. ಎಂಬುವುದು ಕಾಣಲಾಗಿದೆ.

## ಉಲ್ಲೇಖಗಳು


1. ಕರ್ನಾಟಕ ಅಂಕಿ ಅಂಶಗಳ ನೋಟ, 2020–21
2. ಬಳ್ಳಾರಿ ಜಿಲ್ಲಾ ಅಂಕಿ ಅಂಶಗಳು ನೋಟ. 2016–17
3. ವಿನಾಯಕ, ಹೈದರಾಬಾದ್ ಕರ್ನಾಟಕದ ಬೇಡ ಸಮುದಾಯದ ಕೃಷಿ ಕಾರ್ಮಿಕ ಮಹಿಳೆಯರ ಸ್ಥಿತಿ ಗತಿಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ 2019.
4. ಬಳ್ಳಾರಿ ಜಿಲ್ಲಾ ಗಜೆಟರಿಯರ್
5. ಬಳ್ಳಾರಿ ಜಿಲ್ಲೆಯ ಅಂಕಿ ಅಂಶಗಳ ನೋಟ 2020–21
6. ಮಾನವ ಅಭಿವೃದ್ಧಿ ಸೂಚ್ಯಂಕ 2015



**Creative Commons (CC) License**

This article is an open access article distributed under the terms and conditions of the Creative Commons Attribution (CC BY 4.0) license. This license permits unrestricted use, distribution, and reproduction in any medium, provided the original author and source are credited.